## *ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.*

ಸಂಖ್ಯೆ:ಸಿ5[1]ಬೋ.ನೌ.ವರ್ಗ:10:2011-12 ದಿನಾಂಕ:16ನೇ ಜೂನ್ 2011

### *ಜ್ಞಾಪನ*

***ವಿಷಯ***: 2011-12ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕೇತರ ಅಧಿಕಾರಿ / ನೌಕರರ ವರ್ಗಾವಣೆ ಬಗ್ಗೆ.

***ಉಲ್ಲೇಖ***: ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್:04:ಎಸ್‌ಟಿಆರ್:2001, ದಿ:22.11.2001.

2] ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:12:ಸೇನೌವ:2001, ದಿನಾಂಕ:27.04.2011.

3] ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ:09.05.2011.

2011-12ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ಬೋಧಕೇತರ 'ಬಿ' 'ಸಿ' ಮತ್ತು 'ಡಿ' ವೃಂದದ ಅಧಿಕಾರಿ/ನೌಕರರುಗಳು ವರ್ಗಾವಣೆ ಕೋರಿ ಸಲ್ಲಿಸಿರುವ ಅರ್ಜಿಗಳನ್ನು ವೃಂದವಾರು ಪಟ್ಟಿ ಮಾಡಿ ಶಿಕ್ಷಣ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ. ಸದರಿ ಪಟ್ಟಿಗಳನ್ನು ಪರಿಶೀಲಿಸಿ, ಯಾರಾದರೂ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿದ್ದು ಅಂತಹವರ ಹೆಸರು ಪಟ್ಟಿಯಲ್ಲಿ ಸೇರಿರದಿದ್ದಲ್ಲಿ, ಸೂಕ್ತ ವಿವರ/ಮಾಹಿತಿಗಳೊಂದಿಗೆ ದಿನಾಂಕ 24-06-2011ರ ಒಳಗೆ ಈ ಕಛೇರಿಗೆ ತಲುಪುವಂತೆ ಸಲ್ಲಿಸಲು ತಿಳಿಸಿದೆ. ಜಿಲ್ಲೆಯೊಳಗಿನ ವರ್ಗಾವಣೆ ಅರ್ಜಿಗಳನ್ನು ಈಗಾಗಲೇ ಸಂಬಂಧಿಸಿದ ಉಪ ನಿರ್ದೇಶಕರಿಗೆ ಕಳುಹಿಸಿದೆ.

***ಅಂತರ್ಜಾಲ ವಿಳಾಸ:*** http://www.schooleducation.kar.nic.in.

*ಸಹಿ:-*

*[ಎನ್.ಬಿ.ಪಾಟೀಲ್]*

*ಜಂಟಿ ನಿರ್ದೇಶಕರು [ಆಡಳಿತ]*

ಆಯುಕ್ತರ ಪರವಾಗಿ

***ಇವರಿಗೆ:***

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ ಇವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2. ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮೈಸೂರು ವಿಭಾಗೀಯ ಕಛೇರಿ, ಮೈಸೂರು ಜಿಲ್ಲೆ.
3. ಪ್ರಾಂಶುಪಾಲರು, ಸಿ.ಟಿ.ಇ., ಮೈಸೂರು, ಮಂಗಳೂರು ಮತ್ತು ಚಿತ್ರದುರ್ಗ.
4. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿನ ಎಲ್ಲಾ ಉಪ ನಿರ್ದೇಶಕರು [ಆಡಳಿತ], ಇವರುಗಳಿಗೆ.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿನ ಎಲ್ಲಾ ಉಪ ನಿರ್ದೇಶಕರು [ಅಭಿವೃದ್ಧಿ], ಇವರುಗಳಿಗೆ.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿನ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
7. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
8. ಕಛೇರಿ ಪ್ರತಿ.